ಚಿತೆಯೇರಬೇಕು, ಅವಳು ಖಳನಾಯಕಿ, ಅವನಾದರೋ ಹುತಾತ್ಮ. ಟೆಡ್‌ನ ಒಳಗಿದ್ದ ಆಕರ್ಷಣೆಗೆ ಸಿಲ್ವಿಯಾಳ ಅನುಮಾನದ ಗುರಾಣಿಯ ರಕ್ಷಣೆ!

ನಿಜವೆಂದರೆ ಈ ಕೃತಿಯ ಅಸಾಧಾರಣ ಶಕ್ತಿಯೇ ಇದನ್ನು ರೂಪಿಸಿರುವ ಅಪ್ಪಟ ಮಾನವೀಯ ಸಂವೇದನೆ. ಗಂಡು ಹೆಣ್ಣೆನ್ನದೆ ಜೀವಕಾಮವು ಇಬ್ಬರನ್ನೂ ಸುಳಿದು ಸುತ್ತಿ ಆವರಿಸುವ ಪರಿಯನ್ನು ನಟರಾಜ್ ಅದೆಷ್ಟು ಆರ್ದ್ರವಾಗಿ, ತೀವ್ರವಾಗಿ ಚಿತ್ರಿಸುತ್ತಾರೆಂದರೆ, ಇದನ್ನು ಓದುವ ಹೆಣ್ಣು ಮನಸ್ಸಿಗೆ ತನ್ನ ಭಾವಲೋಕದ ಬಗೆಗೆ, ಕಾಮನೆಗಳ ಬಗೆಗೆ ಎಲ್ಲೋ ಹುದುಗಿರಬಹುದಾದ ಸಣ್ಣಾತಿಸಣ್ಣ ಅನುಮಾನಗಳು ನಾಶವಾಗಿಬಿಡಬೇಕು. ಯಾವ ಸಂವೇದನೆಗಾಗಿ ಸ್ತ್ರೀವಾದಿಗಳು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೋ, ಬಯಸುತ್ತಿದ್ದಾರೋ ಅದು ನಟರಾಜರಿಗೆ ಸಿಕ್ಕಿದೆ ಎನ್ನುವುದಕ್ಕೆ ಕೃತಿಯುದ್ದಕ್ಕೂ ಪುರಾವೆಗಳಿವೆ. ಈ ಕೃತಿಗೆ ನಮ್ಮ ಕಾಲದ ಅತ್ಯುತ್ತಮ ಪಠ್ಯ ಎನ್ನುವ ಹೆಗ್ಗಳಿಕೆ ಸಿಕ್ಕೇ ಸಿಗುತ್ತದೆ ಎನ್ನುವುದಾದರೆ ಅದಕ್ಕೆ ಇದೊಂದು ಬಹುಮುಖ್ಯ ಕಾರಣ ಎನ್ನುವುದರಲ್ಲಿ ಯಾರಿಗೂ ಅನುಮಾಗಳಿರುವುದು ಸಾಧ್ಯವಿಲ್ಲ. ಯಾವುದನ್ನು ಅಕ್ಕ ನಾನೆನ್ನೆ ನೀನೆನ್ನೆ ಎಂದು ಕನವರಿಸುತ್ತಾಳೋ ಅಂಥ ಕನವರಿಕೆ ಸಾಕ್ಷಾತ್ಕಾರಗೊಂಡಂತೆ ಕಾಣುತ್ತದೆ ಈ ಕೃತಿಯಲ್ಲಿ. ಗಂಡು ಹೆಣ್ಣು ಇಬ್ಬರಿಗೂ ಇರಬೇಕಾದ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಎರಡನ್ನೂ ಇಲ್ಲಿ ಇಬ್ಬರೂ ಪಡೆದಿದ್ದಾರೆ. ಆ ಕಾರಣಕ್ಕಾಗಿ ಇದು ಸ್ತ್ರೀಸಂಕಥನದ ನಮ್ಮ ಕಾಲದ ನಿರ್ಣಾಯಕ ನಿರೂಪಣೆಗಳಲ್ಲಿ ಒಂದಾಗುತ್ತದೆ. ಇದು ಕನ್ನಡದಲ್ಲಿ ಘಟಿಸಿದೆ ಎನ್ನುವುದು ನಮ್ಮ ಹೆಮ್ಮೆ. ಇಂಥ ಕೃತಿಯಲ್ಲೂ ಒಕ್ಕರಿಸುವ ಈ ಮಾತು ಅಗತ್ಯಕ್ಕಿಂತ ಹೆಚ್ಚು ವ್ಯಗ್ರತೆಯನ್ನು ಹುಟ್ಟಿಸುತ್ತದೆ. ಇದಕ್ಕೆ ಸಿಲ್ವಿಯಾಳ ಬದುಕಿನಲ್ಲಿ ಏನಾದರೂ ಆಧಾರವಿತ್ತೆನ್ನುವುದಕ್ಕೆ ಕೃತಿ ಯಾವ ಸಾಕ್ಷಿಯನ್ನೂ ಒದಗಿಸುವುದಿಲ್ಲ. ಬದಲಿಗೆ ಅದು ಸಿಲ್ವಿಯಾಳ ವ್ಯಕ್ತಿತ್ವದ ಸಹಜ ದೌರ್ಬಲ್ಯ ಎನ್ನುವ ಎಳೆ ಹಿಡಿದು ಹೊರಡುತ್ತದೆ. ಅದು ಹೆಣ್ಣಿನ ಮೂಲಗುಣಗಳಲ್ಲಿ ಒಂದು ಎನ್ನುವ ಧ್ವನಿಯೂ ನಮಗೆ ಕೇಳಿಸುತ್ತದೆ. ಮಾನವ ಸಹಜ ದೌರ್ಬಲ್ಯವಾಗಿ ಸಿಲ್ವಿಯಾಳ ಈ ನಡವಳಿಕೆಯನ್ನು ಒಪ್ಪೋಣ, ಆದರೆ ಟೆಡ್‌ಗೆ ಯಾಕೆ ಅಂಥ ಅನವಶ್ಯಕ ರಕ್ಷಣೆ ಮತ್ತು ಸಮರ್ಥನೆ?

ಟೆಡ್ ಮತ್ತು ಸಿಲ್ವಿಯಾರ ಸಂಬಂಧಕ್ಕೆ ಹತ್ತಿರವಿರುವ ಇದಕ್ಕೆ ಸಂವಾದಿಯಾದ ಎಷ್ಟೋ ಸಂಬಂಧಗಳಿರಬಹುದೇನೋ ಚರಿತ್ರೆಯಲ್ಲಿ, ಸಮಕಾಲೀನ ಜಗತ್ತಿನಲ್ಲಿ. ಬೆಳಕಿಗೆ ಬಾರದ, ದಾಖಲಾಗದ ಅದೆಷ್ಟೋ ಅಪೂರ್ವ ಸಂಬಂಧಗಳಿಗೆ ಬರೆದ ಭಾಷ್ಯವಾಗಿಯೂ ಇದು ಕಾಣಿಸುತ್ತದೆ. ಕಾವ್ಯವು ತಾತ್ಕಾಲಿಕವಾದ ಸಂಬಂಧವೊಂದನ್ನು ಶಾಶ್ವತಗೊಳಿಸುವ ಮಾಂತ್ರಿಕ ಶಕ್ತಿಯನ್ನು ಪಡೆದಿದೆ ಎನ್ನುವುದನ್ನು ಹೇಳುತ್ತಲೇ ಈ ಕೃತಿ ಮುಕ್ತತೆಯೆನ್ನುವುದರ, ಪ್ರಾಮಾಣಿಕತೆಯ, ಪ್ರೀತಿಯ ದಿವ್ಯಶಕ್ತಿಯನ್ನೂ ಅನಾವರಣಗೊಳಿಸುತ್ತದೆ. ಆದರೆ, ಹಾಗೆ ಮಾಡುವಾಗ ಎಲ್ಲಿಯೂ ಇದು ಹುಸಿಯನ್ನು ನೆಚ್ಚುವುದಿಲ್ಲ. ದಿಟವನ್ನು ಅದೆಷ್ಟೇ ದಾರುಣವಾಗಿದ್ದರೂ ಎದುರಾಗುತ್ತದೆ.

ಇಂಥದೊಂದು ಕೃತಿ ನಟರಾಜರ ಪ್ರತಿಭೆ ಮತ್ತು ವ್ಯುತ್ಪತ್ತಿ ಎರಡರಿಂದಲೂ ರೂಪುಗೊಂಡಿದೆ. ಈ ಕೃತಿಗಾಗಿ ಅವರು ನಡೆಸಿರುವ ಸಂಶೋಧನೆಯ ವ್ಯುತ್ಪತ್ತಿ ಅವರ ಸಹಜ ಪ್ರತಿಭೆಯ ಜೊತೆಯಲ್ಲಿ ಅಖಂಡವಾಗಿ ಬೆರೆತಿದೆ. ಇದಕ್ಕೆ ಹಿಂದೆ ಇದರ ನಂತರ ನಟರಾಜ್ ಯಾವ ಕೃತಿಯನ್ನು ರಚಿಸದಿದ್ದರೂ ಕನ್ನಡದ ಮಹತ್ವದ ನಿರೂಪಣೆಗಳಲ್ಲಿ ಇದು ಉಳಿಯುವ ಸ್ವತಂತ್ರ ಶಕ್ತಿಯನ್ನು ಪಡೆದಿದೆ ಎನ್ನುವುದು ಉತ್ಪ್ರೇಕ್ಷೆಯಲ್ಲ. ಕನ್ನಡದ ಸಂವೇದನೆಯ ಉತ್ಕೃಷ್ಟತೆಯ, ಲೋಕಕ್ಕೆ ಅಗತ್ಯವಾಗಿ ಬೇಕಾಗಿದ್ದ ಜೀವನಮೀಮಾಂಸೆಯ ವ್ಯಾಖ್ಯಾನದಂತಿದೆ ಈ ಕೃತಿ. ಇದು ತಾತ್ವಿಕ ನಿಲುವೂ ಹೌದು, ಒಪ್ಪಿತ, ಅಪೇಕ್ಷಿತ ಒಲವೂ ಹೌದು. ಇದೊಂದು ಮಹಾಕಾವ್ಯದ ಹೊಸರೂಪ ಎಂದು ಓದುಗರಿಗೆ ಅನ್ನಿಸಿದರೆ ಎನ್ನುವ ಆಸೆಯನ್ನು ನಟರಾಜ್ ವ್ಯಕ್ತಪಡಿಸಿದ್ದಾರೆ. ನಿಜಕ್ಕೂ ಇದು ನಮ್ಮ ಕಾಲದ ಮಹಾಕಾವ್ಯ, ಮಹಾಮೀಮಾಂಸೆ. ●